ಅಪೂರ್ವವಾದ ತೇಜಸ್ಸು ಮೆರೆದಾಡಿತು. 'ಈಗ ದೇಹತ್ಯಾಗ ಮಾಡುತ್ತಾರೆ' ಎಂಬ ಸುಳಿವನ್ನೂ ಕೊಡದೆ "ನಾನಿನ್ನು ಹೋಗಿಬರುತ್ತೇನೆ" ಎನ್ನುತ್ತ ನಗುನಗುತ್ತಲೇ ಪಯಣಬೆಳೆಸಿದರು.

"ಸ್ವಾಮಿ ಅದ್ವೈತಾನಂದರು ತಮ್ಮ ಆಧ್ಯಾತ್ಮಿಕ ಯಾತ್ರೆಯನ್ನು ತಡವಾಗಿ ಆರಂಭಿಸಿದರೂ, ಅವರ ಪ್ರಾಮಾಣಿಕತೆ ಮತ್ತು ಶ್ರೀರಾಮಕೃಷ್ಣರ ಮೇಲಣ ಸ್ಥಿರಭಕ್ತಿಗಳು ಜೀವನದ ಕೊನೆಯಲ್ಲಿ ಅವರಿಗೆ ಸಫಲತೆಯನ್ನು ತಂದುಕೊಟ್ಟುವು. ಶ್ರೀರಾಮ ಕೃಷ್ಣರು ವೃದ್ಧಮುಮುಕ್ಷುಗಳಿಗೆ ಅವರೊಂದು ಉದಾಹರಣೆಯಾಗುವಂತೆ ಮಾಡಿದರು. ಅವರ ಜೀವನ ಸಂತೋಷ, ಪಾಂಕ್ತತೆ, ಸ್ವಾವಲಂಬನೆ, ತಾವು ಕೈಗೊಂಡ ಪ್ರತಿಯೊಂದು ಕೆಲಸದಲ್ಲಿಯೂ ಅವರು ತಳೆಯುತ್ತಿದ್ದ ಪ್ರೋತ್ಸಾಹ ಹಾಗೂ ಶ್ರೀರಾಮಕೃಷ್ಣರ ಮೇಲಣ ಆತ್ಮಪೂರ್ವಕ ಭಕ್ತಿ ಮುಂತಾದ ಸದ್ಗುಣಗಳಿಂದಾಗಿ ಶ್ರೀರಾಮಕೃಷ್ಣ ಮಹಾಸಂಘದಲ್ಲಿ ಅವರ ನೆನಪು ಚಿರಸ್ಥಾಯಿಯಾಗಿರುತ್ತದೆ" ಎಂಬ ಸ್ವಾಮಿ ಚೇತನಾನಂದರ ಮಾತುಗಳನ್ನು (**'ದೇವರೊಡನೆ ಬಾಳಿದವರು'**, ಪುಟ ೬೧೭) ಈ ಹೊತ್ತಿನಲ್ಲಿ ಸ್ಮರಿಸಬೇಕು.

**ಅಮೃತವಾಣಿ:** ಈ ಕೆಲವು ಉನ್ನತ ಜೀವನಮೌಲ್ಯಗಳಿಗೆ ಸ್ವಾಮಿ ಅದ್ವೈತಾನಂದರು ಪ್ರತೀಕವಾಗಿದ್ದರು: {೧} ಮಾನವ ಜೀವನದಲ್ಲಿ ಕಷ್ಟಕಾರ್ಪಣ್ಯಗಳಿಗೂ ಒಂದು ಸ್ಥಾನವಿದೆ. ಅವು ನಮಗೆ ಜಗತ್ತಿನ ಅಶಾಶ್ವತೆಯನ್ನು ಅರ್ಥಮಾಡಿಸಿಕೊಡುತ್ತವೆ. {೨} ನಮ್ಮನ್ನು ತಮಾಷೆಮಾಡಿ ಯಾರಾದರೂ ಆನಂದಪಟ್ಟರೆ ನಾವೂ ಆ ಆನಂದದಲ್ಲಿ ಪಾಲುದಾರರಾಗಬೇಕು. {೩} ಸೋಮಾರಿತನವೆಂಬುದು ಮನುಷ್ಯನ ಪ್ರಧಾನಶತ್ರು; ಏಕೆಂದರೆ ಆ ಶಬ್ದದೊಳಗೇ ಒಂದು 'ಮಾರಿ' ತಲೆಮರೆಸಿ ಕುಳಿತು ಕೊಂಡಿದೆ. {೪}ಸಂನ್ಯಾಸಿಯು ಸ್ವಾವಲಂಬಿಯಾಗಿರಬೇಕು, ಭಗವಂತನ ಹೊರತಾಗಿ ಯಾರನ್ನೂ ನೆಚ್ಚಿಕೊಳ್ಳಬಾರದು. {೫} ಒಂದು ಸಂಸ್ಥೆಯು ಯಶಸ್ವಿಯಾಗುವುದು ಅದು ಬಹಳ ದೊಡ್ಡದು, ಬಹಳ ಹಳೆಯದು ಎಂಬ ಕಾರಣದಿಂದಲ್ಲ. ಸಂಸ್ಥೆ ಯನ್ನೇ ಹಾಸಿ, ಸಂಸ್ಥೆಯನ್ನೇ ಹೊದ್ದು, ಅದರ ಅಭಿವೃದ್ಧಿಯ ಕನಸುಕಂಡು ನನಸಾಗಿಸುವ ಜನರಿಂದ ಅದು ಕೀರ್ತಿಶಾಲಿ ಯಾಗುತ್ತದೆ. {೬} ಪ್ರಪಂಚವು ಅನಿತ್ಯವಾದುದು; ಮೃಗಜಲದಂತೆ ಅದು ಸುಖದ ಭ್ರಾಂತಿಯನ್ನು ಹುಟ್ಟಿಸಿ ನಮ್ಮನ್ನು ವ್ಯರ್ಥ ವಾಗಿ ಅಲೆದಾಡಿಸುತ್ತದೆ. ದುಃಖವನ್ನೂ, ಭ್ರಾಂತಿಯನ್ನೂ ನಿರ್ಮೋಹದಿಂದಲೇ ಗೆಲ್ಲಬೇಕು. {೭} ಸಾಧನೆಯಲ್ಲಿ ಮುಂದುವರೆಯಬೇಕಾದರೆ ಸದ್ಗುರುವಿನ ಉಪದೇಶಗಳನ್ನೂ ಅವರ ಜೀವನಶೈಲಿಯನ್ನೂ ಒಂದೇ ಸಮನೆ ಹೀರಿಕೊಳ್ಳು ತ್ತಿರಬೇಕು. ಹಾಗೆ ಹೀರಿಕೊಂಡದ್ದನ್ನು ಅನುಷ್ಠಾನಕ್ಕೆ ತಂದುಕೊಂಡು ಬಳಿಕ ಇತರರೂ ಅನುಷ್ಠಾನಕ್ಕೆ ತಂದುಕೊಳ್ಳುವಂತೆ ಪ್ರೋತ್ಸಾಹಿಸಬೇಕು. {೮} ಅವರು ಕಾಡುಜನರು, ಅರಣ್ಯವಾಸಿಗಳು, ಅವರಲ್ಲೇನು ಹೆಚ್ಚಳವಿದೆ ಎಂದು ಯಾರನ್ನೂ ಉಪೇಕ್ಷಿಸಬಾರದು. ಒಂದೊಂದು ಜನಸಮುದಾಯದಲ್ಲಿಯೂ ಏನಾದರೊಂದು ವಿಶೇಷವಿರುತ್ತದೆ. ಆ ಸಮುದಾಯದ ಸಂಸ್ಕೃತಿಯನ್ನೂ, ಜೀವನಕ್ರಮವನ್ನೂ ಅರಿಯುವ ಪ್ರಾಮಾಣಿಕ ಪ್ರಯತ್ನವನ್ನು ಮಾಡಬೇಕು. {೯} ವಿನೋದಶೀಲತೆಯು ಬದುಕಿನ ಅವಿಭಾಜ್ಯ ಅಂಗವಾಗಬೇಕು. ಅದು ವಯಸ್ಸಿನ ತಡೆಗೋಡೆಗಳನ್ನು ಕೆಡವಿಹಾಕುತ್ತದೆ; ಬದುಕಿನ ಏಕತಾನತೆ ಯನ್ನೂ ಬೇಸರಗಳನ್ನೂ ತೊಡೆದುಹಾಕುತ್ತದೆ. *




## ಶ್ರೀರಾಮಕೃಷ್ಣರ ದೃಷ್ಟಾಂತ ಕಥೆಗಳು

ಅನುವಾದಕರು: **ಕೋ. ಚೆನ್ನಬಸಪ್ಪ**

ಪ್ರಕಾಶಕರು: **ಸಮಾಜ ಪುಸ್ತಕಾಲಯ, ಧಾರವಾಡ;** ವರ್ಷ: **೧೯೫೭**

ಭಗವಾನ್ ಶ್ರೀ ರಾಮಕೃಷ್ಣ ಪರಮಹಂಸರ ಅದ್ಭುತವಾದ ಜೀವನ ಚರಿತ್ರೆಯನ್ನು ಓದುವವರಿಗೆ ಅವರ ಸಾಧನೆ ಮತ್ತು ಸಿದ್ಧಿಗಳ ಭೂಮಿಕೆಯಲ್ಲಿ ಪ್ರತಿಮಾವಿಧಾನವು ಹೆಜ್ಜೆಹೆಜ್ಜೆಗೂ ಮಿಂಚಿ ಮೂಡುವ ಮಹತ್ತು ಗೋಚರಿಸುತ್ತದೆ. "ಒಂದು ದಿನ ನಾನು ಧ್ಯಾನಕ್ಕೆ ಕುಳಿತಿದ್ದಾಗ ನನ್ನ ದೇಹದಿಂದಲೆ ತೇಜಸ್ವಿಯಾದ ಸನ್ಯಾಸಿಯೊಬ್ಬನು ತ್ರಿಶೂಲಧಾರಿ ಯಾಗಿ ಹೊರಗೆ ಬಂದು ಏಕಾಗ್ರತೆಯಿಂದ ಧ್ಯಾನ ಮಾಡುವಂತೆ ನನಗೆ ಆಜ್ಞೆ ಮಾಡಿದನು. ಹಾಗೆ ಕರಿಯ ದೇಹದ ಪಾಪಪುರುಷನು ನನ್ನ ದೇಹದಿಂದಲೆ ಹೊರಕ್ಕೆ ಹಾರಿದನು. ತ್ರಿಶೂಲಧಾರಿಯಾದ ಸಂನ್ಯಾಸಿ ಅವನನ್ನು ಅಲ್ಲಿಯೆ ತಿವಿದುಕೊಂದುಬಿಟ್ಟನು." ಪಾಪಪುಣ್ಯಗಳ ಸ್ವರೂಪ, ಪಾಪವನ್ನು ನಿರಸನಗೊಳಿಸುವ ಪುಣ್ಯದ ಲಕ್ಷಣ, ಪಾಪ ಪುಣ್ಯಗಳ ಹೋರಾಟ, ಕೊನೆಯದಾಗಿ ಪಾಪದ ವಿನಾಶ ಮತ್ತು ಪುಣ್ಯದ ಜಯ – ಇವೆಲ್ಲವೂ ಪರಮ ಹಂಸರಿಗಾದ ಪ್ರತಿಮಾವಿಧಾನದ ಆ ಅನುಭವದಲ್ಲಿ ಎಷ್ಟು ಜೀವಂತವಾಗಿ ಸಶಕ್ತವಾಗಿ ನಾಟಕೀಯ ವಾಗಿ ಸತ್ಯವಾಗಿ ಮೂರ್ತಗೊಂಡಿವೆ! ಅವರ ಮಧುರಭಾವ ಸಾಧನೆ, ವಾತ್ಸಲ್ಯಭಾವ ಸಾಧನೆ, ದಾಸ್ಯ ಭಾವ ಸಾಧನೆ, ಕ್ರಿಸ್ತ ಪೈಗಂಬರಾದಿ ವಿಭೂತಿಪುರುಷರೂ ದೇವದೇವತೆಗಳೂ ಪ್ರತ್ಯಕ್ಷರಾಗಿ ತಮ್ಮಲ್ಲಿಯೆ ವಿಲೀನವಾಗುವ ದಿವ್ಯಾನುಭವಗಳ ಮೂರ್ತಚಿತ್ರಗಳು, ನರೇಂದ್ರನೇ ನರಮಹರ್ಷಿ ಎಂಬುದನ್ನು ಸೂಚಿಸು ವಾಗ ತಾವು ಕಂಡುದೆಂದು ವರ್ಣಿಸುವ ಅತ್ಯಂತ ಸುಂದರವೂ ಲಭ್ಯವೂ ಆಗಿರುವ ಒಂದು ದರ್ಶನ –ಇಂತಹ ನೂರಾರು ಪ್ರಸಂಗಗಳಲ್ಲಿ ಪ್ರತಿಮಾವಿಧಾನದ ವೈಭವವನ್ನೂ ವೈವಿಧ್ಯವನ್ನೂ ಸಂದರ್ಶಿಸುತ್ತೇವೆ. ಆ ವಿಚಾರವಾಗಿ ಪರಮಹಂಸರು ಕೊಡುತ್ತಿದ್ದ ವಿವರಣೆ 'ತಾಯಿ ನನಗೆ ತೋರಿಸುತ್ತಾಳೆ' ಎಂಬುದಾಗಿತ್ತು. ಎಂದರೆ ಅಂತಹ 'ತೋರುವಿಕೆ'ಗೆ ವ್ಯಕ್ತಿಯ ಬಾಹ್ಯಪ್ರಜ್ಞೆಯಾಗಲಿ ಜಾಗ್ರತ ಸತ್ತೆಯ ಸಾಮಾನ್ಯ ಬುದ್ಧಿಯಾಗಲಿ ವ್ಯಕ್ತಿ ಪ್ರಯತ್ನವಾಗಲಿ ನೇರವಾದ ಕಾರಣಗಳಾಗುವುದಿಲ್ಲ.

(ಕುವೆಂಪು ಅವರ 'ದೃಷ್ಟಾಂತ ಕಥಾವಿಧಾನ' ಬರಹದಿಂದ, ಪುಟ ೨ ಮತ್ತು ೩)